ಎಂದು ನಾನು ಅಂದುಕೊಂಡಿಲ್ಲ, ಈ ಬಗ್ಗೆ ತಮ್ಮ ಸ್ಪಷ್ಟ ನಿಲುವು ಏನು ಎಂಬುದನ್ನು ಸ್ಪಷ್ಟವಾಗಿ ಹೇಳಿ. ಅವರನ್ನು ಹಿಡಿಯುತ್ತೇವೆಂದು ಪ್ರತಿ ಸಾರಿಯೂ ಹೇಳಿದ್ದೀರಿ. ಈ ಬಗ್ಗೆ ಕಡತವನ್ನು ತೆಗೆಯಿರಿ, ನಿಮ್ಮ ಪ್ರತಿ ಉತ್ತರಗಳು ಹಿಂದೆ ಇದ್ದಂತಹ ಮುಖ್ಯಮಂತ್ರಿಗಳು, ಎಲ್ಲಾ ಹೇಳಿರುವಂತಹ ಭರವಸೆಗಳು ಈ ಕಡತದಲ್ಲಿವೆ. ಅದರಿಂದ ಏನೂ ಪ್ರಯೋಜನವಾಗಿಲ್ಲ. ಆದುದರಿಂದ ತಾವು ಸ್ಪಷ್ಟವಾಗಿ ಹೇಳಿ.

ಶ್ರೀ ಸಿ. ಬೈರೇಗೌಡ: ಹಿಡಿಯುತ್ತೇವೆ, ಎಂಬುದನ್ನು ಬಿಟ್ಟು ಇನ್ನು ಏನು ಹೇಳುವುದಕ್ಕೆ ಆಗುತ್ತದೆ?

ಉಚ್ಚ ನ್ಯಾಯಾಲಯದಲ್ಲಿ ಮಹಿಳಾ ನ್ಯಾಯಾಧೀಶರು

537 - ಶ್ರೀ ಆರ್. ನಾರಾಯಣ (ಬಳ್ಳಾವಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತ ದೇಶದಲ್ಲಿ ಬೇರೆ ಬೇರೆ ರಾಜ್ಯಗಳ ಉಚ್ಚ ನ್ಯಾಯಾಲಯದಲ್ಲಿ ಮಹಿಳಾ ನ್ಯಾಯಾಧೀಶರಿರುವುದು ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದ ಪಕ್ಷದಲ್ಲಿ ಕರ್ನಾಟಕದಲ್ಲಿ ಅರ್ಹತೆಯುಳ್ಳ ಮಹಿಳಾ ನ್ಯಾಯವಾದಿಗಳು ಇರುವರೆ?

ಇ) ಅರ್ಹತೆಯುಳ್ಳ ಮಹಿಳಾ ನ್ಯಾಯವಾದಿಗಳು ಇದ್ದಲ್ಲಿ ಕರ್ನಾಟಕದಲ್ಲಿ ಏಕೆ ಆರಿಸಿ ಬಂದಿಲ್ಲ?

ಈ) ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರಿಗೆ ಮೀಸಲು ಎಂದು ಹೇಳುವ ಸರ್ಕಾರ ಈ ಬಗ್ಗೆ ಗಮನಹರಿಸಿಲ್ಲವೇಕೆ?

ಉ) ಗಮನ ಹರಿಸಿದ್ದಲ್ಲಿ, ಮುಂದಿನ ಆಯ್ಕೆಯಲ್ಲಿ ಮಹಿಳಾ ನ್ಯಾಯಾಧೀಶರನ್ನು ನೇಮಿಸಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಬೇರೆ ಬೇರೆ ರಾಜ್ಯಗಳ ಉಚ್ಚ ನ್ಯಾಯಾಲಯದಲ್ಲಿನ ಮಹಿಳಾ ನ್ಯಾಯಾಧೀಶರುಗಳ ಸಂಖ್ಯೆಯ ಬಗ್ಗೆ ಸದ್ಯದಲ್ಲಿ ಮಾಹಿತಿ ಇರುವುದಿಲ್ಲ. ಇದನ್ನು ಭಾರತದ ಸರ್ವೋಚ್ಚ ನ್ಯಾಯಾಲಯದಿಂದ ಪಡೆದುಕೊಳ್ಳಲಾಗುವುದು. ಅದಾಗ್ಯೂ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಮಹಿಳಾ ನ್ಯಾಯಾಧೀಶರು ಇರುವುದಿಲ್ಲ.

ಆ) ಈ ವಿಷಯಗಳ ಬಗ್ಗೆ ಉಚ್ಚ ನ್ಯಾಯಾಲಯವು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ ಎಂಬುದಾಗಿ ಉಚ್ಚ ನ್ಯಾಯಾಲಯವು ಉತ್ತರ ನೀಡಿದೆ.

ಈ) ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಯನ್ನು ರಾಷ್ಟ್ರಪತಿಯವರು ಮಾಡುವುದರಿಂದ ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುವುದು.

ಶ್ರೀ ಆರ್. ನಾರಾಯಣ: ಮಾನ್ಯ ಅಧ್ಯಕ್ಷರೆ, ರಾಜ್ಯದ ಉಚ್ಚ ನ್ಯಾಯಾಲಯಗಳಲ್ಲಿ ಮಹಿಳಾ ನ್ಯಾಯಾಧೀಶರುಗಳನ್ನು ನೇಮಕ ಮಾಡುವ ಬಗ್ಗೆ, ರಾಜ್ಯ ಉಚ್ಚ ನ್ಯಾಯಾಲಯಗಳ ಶಿಫಾರಸ್ಸುಗಳ ಅನ್ವಯ ರಾಷ್ಟ್ರಪತಿಯವರು ಮಾಡುತ್ತಾರೆ ಎಂದು ಉತ್ತರಕೊಟ್ಟಿದ್ದಾರೆ ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಏಕೆ ಈ ವಿಷಯದ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯಗಳ ಅಭಿಪ್ರಾಯದ ರೂಪದಲ್ಲಿ ಮನವಿಯನ್ನು ಏಕೆ ಮಾಡಬಾರದೆಂದು ನಾನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ,ನಮ್ಮ ಅಭಿಪ್ರಾಯ ಕೂಡ ಅದೇ ಆಗಿದೆ. ನಮ್ಮ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಒಬ್ಬ ಮಹಿಳಾ ನ್ಯಾಯಾಧೀಶರು ಇರಬೇಕೆಂಬ ಅಪೇಕ್ಷೆ ನಮಗೂ ಇದೆ. ಮುಂದೆ ನೇಮಕಾತಿ ಆಗುವಾಗ ಅದು ಆಗಬೇಕು ಎಂಬ ಒತ್ತಾಯವನ್ನು ನಾನು ಖಂಡಿತವಾಗಿ ಸರ್ಕಾರದ ಪರವಾಗಿ ಹೇಳುತ್ತೇನೆ.